**ದಿನಾಂಕಃ 18-11-2021 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.-**

<u>ಪಾಟೀ ಸವಾಲುಃ ಶ್ರೀ. ಬಿ ಎನ್ ಆರ್ ವಾದಿಗಳ ಪರ ವಕೀಲರಿಂದಃ</u> ವಾದಿ ಮತ್ತು ಪ್ರತಿವಾದಿ 1 ರಿಂದ 19 ರವರು ಗೊತ್ತು. ನಾವುಗಳು ಒಂದೇ ಕುಟುಂಬದವರು ಅಂದರೆ ಸರಿ, 7 ನೇ ಪ್ರತಿವಾದಿಯು ಕುಟುಂಬದವರಲ್ಲ. ಪ್ರತಿವಾದಿ 20 ಮತ್ತು 21 ನಮ್ಮ ಕುಟುಂದವರಲ್ಲ ಅಂದರೆ ಸರಿ. ನಮ್ಮ ಕುಟುಂಬದ ಮೂಲ ಪುರುಷ ರೇವಣ್ಣೆಗಳ ಸಿದ್ದಲಿಂಗಪ್ಪ ಅಂದರೆ ಸರಿ. ಅವರಿಗೆ 3 ಜನ ಗಂಡು ಮತ್ತು 3 ಜನ ಹೆಣ್ಣು ಮಕ್ಕಳು ಅಂದರೆ ಸರಿ. ಈ ಎಲ್ಲಾ ಮಕ್ಕಳು ತೀರಿಕೊಂಡಿದ್ದಾರೆ ಅಂದರೆ ಸರಿ. ಶರಣಪ್ಪ ಮತ್ತು ವಜ್ರಪ್ಪ ಇವರು ಚೆನ್ನಬಸಮ್ಮನ ಮಕ್ಕಳು ಅಂದರೆ ಸರಿ. ರೇವಣ್ಣೆಗಳ ಚೆನ್ನಬಸಪ್ಪನಿಗೆ ಮೂಲ ವಾದಿ ಮಹೇಶಪ್ಪ ಒಬ್ಬನೇ ಮಗ ಅಂದರೆ ಸರಿಯಲ್ಲ, ಮಹೇಶಪ್ಪ, ಸಿದ್ದಪ್ಪ ಮತ್ತು ಗಂಗಮ್ಮ ಮಕ್ಕಳು. ಚೆನ್ನಬಸಪ್ಪನಿಗೆ 3 ಮಕ್ಕಳು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಅವರಿಗೆ 3 ಜನ ಮಕ್ಕಳು ಅನ್ನುವ ಬಗ್ಗೆ ದಾಖಲೆ ನೋಡಿಲ್ಲ.

2. ವಾದಿ 1 ಹೆಚ್ ನನ್ನ ಪತಿ ಅಂದರೆ ಸರಿ. ಚೆನ್ನಬಸಪ್ಪನಿಗೆ ಮಹೇಶಪ್ಪ ಒಬ್ಬನೇ ಮಗ ಆದರೆ ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಅಂದರೆ ಸರಿಯಲ್ಲ. ಗುರುಸಿದ್ದಮ್ಮ ಮತ್ತು ತಿಂಡಪ್ಪನಿಗೆ ಇಬ್ಬರು ಮಕ್ಕಳು, ಅವರು ಷಣ್ಮುಖಪ್ಪ ಮತ್ತು ಪಾರ್ವತಮ್ಮ. ಪಾರ್ವತಮ್ಮ ಮಾತ್ರ ಅವರ ಮಗಳು ಅಂದರೆ ಸರಿಯಲ್ಲ . ಪಾರ್ವತಮ್ಮ ಮತ್ತು ಚಂದ್ರಪ್ಪನ ಒಬ್ಬಳೇ ಮಗಳು ವಿಮಲಾಕ್ಷಿ . ಶಂಕ್ರಪ್ಪ ಅನ್ನುವವರು ಮದುವೆಗಿಂತ ಮೊದಲೇ ತೀರಿಕೊಂಡಿರುತ್ತಾರೆ ಅಂದರೆ ಸರಿ. ಶಿವ್ವಕ್ಕನ ಪತಿ ಕಲ್ಲಜ್ಜಿ ಸಿದ್ದಲಿಂಗಪ್ಪ. ಇವರು ನನ್ನ ತಂದೆಯ ತಂದೆ ಅಂದರೆ ಸರಿ. ನನ್ನ ತಂದೆ ಕೊಟ್ರೇಶಪ್ಪ, ಕೊಟ್ರಬಸಮ್ಮ ಮತ್ತು ಗುರುಸಿದ್ದಮ್ಮ ಇವರು ಕಲ್ಲಜ್ಜಿ ಸಿದ್ದಲಿಂಗಪ್ಪನ ಮಕ್ಕಳು ಅಂದರೆ ಸರಿ. ದಾವಾ ಆಸ್ತಿಗಳು ಮೂಾಲತಃ ರೇವಣ್ಣೆಗಳ ಸಿದ್ದಲಿಂಗಪ್ಪನ ಆಸ್ತಿಗಳು ಅಂದರೆ ಸರ್ವೇ ನಂಬರ 415 ಮಾತ್ರ ಅವರ ಆಸ್ತಿಯಲ್ಲ . ಸರ್ವೇ ನಂಬರ 415 ಇದು 3 ನೇ ಪ್ರತಿವಾದಿಯ ಆಸ್ತಿ . ಇದು 3 ನೇ ಪ್ರತಿವಾದಿಯ ಆಸ್ತಿ ಅಲ್ಲ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಈ ಆಸ್ತಿಯು ಅವರ ತಾಯಿ ಗುರುಸಿದ್ದಮ್ಮನಿಂದ ಬಂದಿದೆ. 1995 ರ ಹಕ್ಕುಬಿಡುಗಡೆ ಪತ್ರದ ಪ್ರಕಾರ ಬಂದಿದೆ. ಆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಿದ್ದೆನೆ. ನಾನು ಆ ಪತ್ರವನ್ನು ಹಾಜರು ಪಡಿಸದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ 50 ನ್ನು ಹಕ್ಕು ಬದಲಾವಣೆಗೆ ಕೂಡ್ಲಿಗಿ ತಾಲೂಕು ಕಛೇರಿಯಲ್ಲಿ ಸಲ್ಲಿಸಲಾಗಿತ್ತು ಅಂದರೆ ಸರಿ. ನಿಪಿ 49 ನೋಂದಣಿಯಾಗಿರುವುದಿಲ್ಲ. ಸರ್ವೇ ನಂಬರ 415 ನ್ನು ಕಬಳಿಸಲು ನಿಪಿ 45 ರಿಂದ 54 ರವರೆಗಿನ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ.

3. ಈ ರೀತಿ ಸೃಷ್ಟಿಸಿರುವ ದಾಖಲೆಗಳ ಆಧಾರ ಮೇಲೆ ವಾದಿಗಳಿಗೆ ಗೊತ್ತಾಗದಂತೆ ಹಕ್ಕುಬದಲಾವಣೆ ಮಾಡಿಸಿಕೊಂಡಿದ್ದೆವೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು 1 ರಿಂದ 19 ರ ಪ್ರತಿವಾದಿಗಳ ನಡುವೆ ಇಲ್ಲಿಯವರೆಗೂ ವಿಭಾಗವಾಗಿರುವುದಿಲ್ಲ ಅಂದರೆ ಸರಿಯಲ್ಲ, ಸರ್ವೇ ನಂಬರ 415 ನ್ನು ಹೊರತುಪಡಿಸಿ ಉಳಿದ ಆಸ್ತಿಗಳಿಗೆ ವಿಭಾಗವಾಗಿದೆ. ಯಾವಾಗ ವಿಭಾಗವಾಗಿದೆ ಅನ್ನುವುದು ಗೊತ್ತಿಲ್ಲ. ಸದರಿ ವಿಭಾಗ ಬಾಯಿ ಮಾತಿನಲ್ಲಿ ಆಗಿದೆಯೋ ಅಥವಾ ಬರೆವಣಿಗೆಯಲ್ಲಿ ಆಗಿದೆಯೋ ನನಗೆ ಗೊತ್ತಿಲ್ಲ. ನಾನು ಚಿಕ್ಕವಳಾದ್ದರಿಂದ ವಿಭಾಗವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಸರ್ವೇ ನಂಬರ 415 ರ ಮೇಲೆ ಪ್ರತಿವಾದಿ 3, 8 ಮತ್ತು 15 ರಿಂದ 18 ರವರಿಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ವಾದಿಗಳು ಮತ್ತು 1 ರಿಂದ 19 ರವರೆಗಿನ ಪ್ರತಿವಾದಿಗಳ ದಾವಾ ಆಸ್ತಿಗಳ ಜಂಟಿ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ, ಸರ್ವೇ ನಂಬರ 579 ರಲ್ಲಿ ಮಾತ್ರ ಜಂಟಿ ಸ್ವಾಧೀನದಲ್ಲಿದ್ದಾರೆ.

4. ಗುರುಸಿದ್ದಮ್ಮ ಮತ್ತು ತಿಂಡಪ್ಪನಿಗೆ ನನ್ನ ಅಜ್ಜಿ ಪಾರ್ವತಮ್ಮನಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಡುವ ಹಕ್ಕು ಇರವುದಿಲ್ಲ ಅಂದರೆ ಸರಿಯಲ್ಲ. ನನ್ನ ಅಜ್ಜಿ , ಗುರುಸಿದ್ದಮ್ಮ ಮತ್ತು ತಿಂಡಪ್ಪ ಮೂಲ ಹಕ್ಕುದಾರ ರೇವಣ್ಣೆಗಳ ಸಿದ್ದಲಿಂಗಪ್ಪನವರಿಗೆ ಗೊತ್ತಾಗದಂತೆ ಈ ರೀತಿ ಪತ್ರ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳು 1 ರಿಂದ 19 ರವರೆಗಿನ ಪ್ರತಿವಾದಿಗಳಿಗೆ ಹಕ್ಕು ಮತ್ತು ಭಾಗಾಂಶ ಇರುತ್ತದೆ ಅಂದರೆ ಸರ್ವೇ ನಂಬರ 415 ನ್ನು

ಡಿಡಬ್ಲ್ಯೂ-1
ಓ ಎಸ್ 42/2014

ಹೊರತುಪಡಿಸಿ ಉಳಿದ ಆಸ್ತಿಗಳಲ್ಲಿ ಇರಬಹುದು. ಸರ್ವೇ ನಂಬರ 415 ರಲ್ಲಿಯೂ ಹಕ್ಕು ಮತ್ತು ಭಾಗಾಂಶ ಇದೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.